**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

ಸಂಃಸಸಂವಿ/ತಾಂ–1/ಜೈ.ಪೀ.ಹಂ/2021–22

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು–01,
ದಿನಾಂಕ: 31–05–2021

ಇವರಿಗೆ,

ಜಂಟಿ ಕೃಷಿ ನಿರ್ದೇಶಕರು
ಕಲಬುರಗಿ/ಯಾದಗಿರಿ/ಬೀದರ

ವಿಷಯ: ಇಲಾಖೆಯ ಪ್ರಯೋಗಾಲಯಗಳಲ್ಲಿ ಉತ್ಪಾದಿಸಲಾಗಿರುವ ಜೈವಿಕ ಪೀಡೆನಾಶಕಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡುವ ಕುರಿತು

ಉಲ್ಲೇಖ: ಸಹಾಯಕ ಕೃಷಿ ನಿರ್ದೇಶಕರು, ಜೈವಿಕ ನಿಯಂತ್ರಣ ಪ್ರಯೋಗಾಲಯ, ಕಲಬುರಗಿ ರವರ ಪತ್ರ ಸಂಖ್ಯೆ:ಸ.ಕೃ.ನಿ/ಜೈ.ನಿ.ಪ್ರ.ಕ/ತಾಂತ್ರಿಕ/2021–22 ದಿನಾಂಕ 12–05–2021

****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಇಲಾಖೆಯ ಜೈವಿಕ ನಿಯಂತ್ರಣ ಪ್ರಯೋಗಾಲಯ, ಕಲಬುರಗಿ ಇಲ್ಲಿ 2021–22ನೇ ಸಾಲಿನಲ್ಲಿ ಪ್ರಯೋಗಾಲಯಕ್ಕೆ ನಿಗದಿಪಡಿಸಲಾಗಿರುವ 12.0 ಟನ್ ಟ್ರೈಕೋಡೆರ್ಮಾ ಮತ್ತು 2.0 ಟನ್ ಸ್ಯೂಡೋಮೋನಾಸ್ ಜೈವಿಕ ಪೀಡೆನಾಶಕಗಳ ಉತ್ಪಾದನೆಯ ಗುರಿಯನ್ನು ನಿಗದಿಪಡಿಸಲಾಗಿದ್ದು, ಉತ್ಪಾದಿಸಲಾಗುತ್ತಿರುವ ಜೈವಿಕ ಪೀಡೆನಾಶಕಗಳನ್ನು ಜಿಲ್ಲೆಗಳಿಗೆ ಹಂಚಿಕೆಮಾಡಲು ಉಲ್ಲೇಖಿತ ಪತ್ರದಲ್ಲಿ ಕೋರಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕೆಳಕಂಡ ಜಿಲ್ಲೆಗಳಿಗೆ ನೀಡಲಾಗಿರುವ ಹಂಚಿಕೆಯನ್ವಯ ಜೈವಿಕ ಪೀಡೆನಾಶಕಗಳನ್ನು ಜೈವಿಕ ನಿಯಂತ್ರಣ ಪ್ರಯೋಗಾಲಯ, ಕಲಬುರಗಿ ಇಲ್ಲಿಂದ ಕಡ್ಡಾಯವಾಗಿ ಪಡೆದು ರೈತರಿಗೆ ವಿತರಿಸಲು ಹಾಗು ಸರಬರಾಜು ಬಾಬ್ತು ಹಣವನ್ನು ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಭರಿಸುವುದು. ಮುಂದುವರೆದು, 2021–22ನೇ ಸಾಲಿನಲ್ಲಿ ಸಸ್ಯ ಸಂರಕ್ಷಣಾ ಪೀಡೆನಾಶಕಗಳ ದರಪಟ್ಟಿಯಲ್ಲಿ ಅನುಮೋದನೆಗೊಂಡಿರುವ ಎಲ್1 ದರದನ್ವಯ ವೆಚ್ಚ ಭರಿಸಲು ಸೂಚಿಸಿದೆ.

| ಕ್ರ.ಸಂ. | ಜಿಲ್ಲೆ | ಹಂಚಿಕೆ ಮಾಡಲಾಗಿರುವ ಜೈವಿಕ ಪೀಡೆನಾಶಕ (ಟನ್) | |
|---|---|---|---|
| | | ಟ್ರೈಕೋಡೆರ್ಮಾ | ಸ್ಯೂಡೋಮೋನಾಸ್ |
| 1 | ಕಲಬುರಗಿ | 8.0 | 1.0 |
| 2 | ಯಾದಗಿರಿ | 2.0 | 0.5 |
| 3 | ಬೀದರ | 2.0 | 0.5 |

ಅಪರ ಕೃಷಿ ನಿರ್ದೇಶಕರು
(ಸಾವಯವ ಕೃಷಿ)

ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಹಾಯಕ ಕೃಷಿ ನಿರ್ದೇಶಕರು ಜೈವಿಕ ನಿಯಂತ್ರಣ ಪ್ರಯೋಗಾಲಯ, ಕೋಟನೂರು(ಡಿ), ಕಲಬುರಗಿ ಇವರಿಗೆ ಕಳುಹಿಸಿದೆ.

D:\Data\RAM\Letters\Circulars\Circulars 2015-16_2020-21.docx